ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 9–1–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಮಾಜಿ ಪ್ರಧಾನ ಮಂತ್ರಿ ದಿ. ಲಾಲ್‌ಬಹದ್ದೂರ್ ಶಾಸ್ತ್ರಿ ಪುಣ್ಯತಿಥಿ ಅಂಗವಾಗಿ ಪ್ರತಿಮೆ ಬಳಿ ಭಾವಚಿತ್ರಕ್ಕೆ ಮಾಲಾರ್ಪಣೆ.<br><br>ಶ್ರೀ ಸಿದ್ಧರಾಮಯ್ಯ,<br>ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ | 11–01–2015<br>ಭಾನುವಾರ<br>ಬೆಳಗ್ಗೆ<br>10–00 ಗಂಟೆಗೆ | ಬೆಂಗಳೂರು ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ದಿ. ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಪ್ರತಿಮೆ ಬಳಿ |
| 2. | ಪತ್ರಿಕಾಗೋಷ್ಠಿ:<br><br>ಶ್ರೀ ದಿನೇಶ್ ಗುಂಡೂರಾವ್,<br>ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ರಾಜ್ಯ ಸಚಿವರು. | 12–01–2015<br>ಸೋಮವಾರ<br>ಮಧ್ಯಾಹ್ನ<br>12–30 ಗಂಟೆಗೆ | ಕೊಠಡಿ ಸಂಖ್ಯೆ 419,<br>ನಾಲ್ಕನೇ ಮಹಡಿ,<br>ವಿಕಾಸಸೌಧ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ರಾಜ್ಯದಲ್ಲಿ 439 ಹೊಸ ಗ್ರಾಮ ಪಂಚಾಯತ್‌ಗಳ ರಚನೆಗೆ ರಾಜ್ಯ ಸಚಿವ ಸಂಪುಟ ಸಮ್ಮತಿ

ಬೆಂಗಳೂರು, ಜನವರಿ 9 ( ಕರ್ನಾಟಕ ವಾರ್ತೆ ) :

ನಂಜಯ್ಯನಮಠ ವರದಿಯ ಶಿಫಾರಸ್ಸಿನಂತೆ ರಾಜ್ಯದಲ್ಲಿ 439 ಹೊಸ ಗ್ರಾಮ ಪಂಚಾಯತ್‌ಗಳ ರಚನೆಗೆ ರಾಜ್ಯ ಸಚಿವ ಸಂಪುಟ ಸಮ್ಮಿತಿಸಿದೆ.

ರಾಜ್ಯ ಸಚಿವ ಸಂಪುಟದ ಸಭೆಯ ನಂತರ ಪಶುಸಂಗೋಪನೆ ಮತ್ತು ಮುಜರಾಯಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ. ಬಿ. ಜಯಚಂದ್ರ ಅವರು ಶುಕ್ರವಾರ ಪತ್ರಿಕಾ ಗೋಷ್ಠಿಯಲ್ಲಿ ಈ ವಿಷಯವನ್ನು ಬಹಿರಂಗಪಡಿಸಿದರು.

ಗ್ರಾಮ ಪಂಚಾಯತ್‌ಗಳ ರಚನೆಗೆ ಒಂದು ಬಾರಿಯ ಅನುದಾನ 131.70 ಕೋಟಿ ರೂ ಹಾಗೂ ವಾರ್ಷಿಕ ನಿರ್ವಹಣೆಗೆ 69.5 ಲಕ್ಷ ರೂ ಅನುದಾನವನ್ನು ಬಿಡುಗಡೆ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿನ ರಾಷ್ಟ್ರೀಯ ಉದ್ಯಾನಗಳು, ವನ್ಯಜೀವಿ ಧಾಮಗಳು ಮತ್ತು ರಕ್ಷಿತ ಪ್ರದೇಶಗಳ ಸುತ್ತ ಮುತ್ತಲಿನ ಹತ್ತು ಕಿ.ಮೀ ವ್ಯಾಪ್ತಿಯ ಪರಿಸರ ಸೂಕ್ಷ್ಮ ವಲಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಾರ್ಗ ಸೂಚಿಗಳನ್ವಯ ಪರಿಶೀಲಿಸಲು ರಚಿತವಾಗಿರುವ ರಾಜ್ಯ ಸಚಿವ ಸಂಪುಟದ ಉಪ ಸಮಿತಿಯು ಮೂರು ಸಭೆಗಳನ್ನು ನಡೆಸಿದೆ. ಅಲ್ಲದೆ, ಎರಡು ತಂಡಗಳನ್ನು ರೂಪಿಸಿಕೊಂಡು ಸಂಬಂಧಿತ ಜಿಲ್ಲೆಗಳಿಗೆ ಕೂಡಲೇ ಭೇಟಿ ನೀಡಿ, ಬಾಧಿತರೊಂದಿಗೆ ಚರ್ಚಿಸಿ ಜನವರಿ 31 ರೊಳಗೆ ವರದಿ ಸಲ್ಲಿಸುವಂತೆ ಸಚಿವ ಸಂಪುಟ ಉಪಸಮಿತಿಗೆ ಸಂಪುಟ ಸೂಚಿಸಿದೆ.

ಕರ್ನಾಟಕ ಪೂರ್ವ ಪ್ರಸ್ಥ ಭೂಮಿ ಅರಣ್ಯೀಕರಣ ಮೊದಲ ಹಂತಕ್ಕೆ ವೆಚ್ಚವಾಗಿರುವ 742 ಕೋಟಿ ರೂ ಹಾಗೂ ಕರ್ನಾಟಕ ಸುಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣಾ ಯೋಜನೆ ಎರಡನೇ ಹಂತಕ್ಕೆ ವೆಚ್ಚವಾಗಿರುವ 841 ಕೋಟಿ ರೂ ಮೊತ್ತದ ಕಾರ್ಯಕ್ರಮದ ಮರು ಮೌಲ್ಯಮಾಪನ ನಡೆಸಲು ಹಾಗೂ ಮುಂದಿನ ಎಂಟು ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಮೂರನೇ ಹಂತದ ಯೋಜನಾ ವೆಚ್ಚ 1899 ಕೋಟಿ ರೂ ಗಳಿಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.

ಏಪ್ರಿಲ್ 11 ರಿಂದ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ನಡೆಸಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ದತ್ತಾಂಶವನ್ನು ದಾಖಲಿಸಲು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ಗೆ ವಹಿಸಲಾಗಿದೆ. ಖರೀದಿಯಲ್ಲಿ ಪಾರದರ್ಶಕತೆ ಕಾಯಿದೆಯ ಅಡಿಯಲ್ಲಿ 4 (ಜಿ) ವಿನಾಯಿತಿ ನೀಡಿರುವ ಈ ಯೋಜನಾ ಮೊತ್ತ 43.09 ಕೋಟಿ ರೂ ಆಗಿದೆ ಎಂದು ಸಚಿವರು ತಿಳಿಸಿದರು.

ಪೊಲೀಸ್ ಇಲಾಖೆಯ ಆಧುನೀಕರಣ ಯೋಜನೆಯ ಅಡಿಯಲ್ಲಿ ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್ ಮೂಲಕ 6.95 ಕೋಟಿ ರೂ ವೆಚ್ಚದಲ್ಲಿ ಆಯುಧಗಳನ್ನು ಖರೀದಿಸಲು ಸಚಿವ ಸಂಪುಟ ಅನುಮತಿ ನೀಡಿದೆ.

ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿಕ್ಷಣ ಸಂಸ್ಥೆಯ ಹತ್ತು ಎಕರೆ ಭೂಮಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಜ್ಞಾನ ಸಂಪನ್ಮೂಲ ಕೇಂದ್ರ ಸ್ಥಾಪಿಸಲು ಸಂಸ್ಥೆಗೆ ಐದು ಕೋಟಿ ರೂ ಅನುದಾನ ನೀಡಲು ಸಚಿವ ಸಂಪುಟ ನಿರ್ಣಯಿಸಿದೆ.

ಮಂಗಳೂರಿನಲ್ಲಿ 7.2 ಕೋಟಿ ರೂ, ಬೆಳಗಾವಿಯಲ್ಲಿ 6.3 ಕೋಟಿ ರೂ ಹಾಗೂ ಹೊಸಪೇಟೆಯಲ್ಲಿ 6 ಕೋಟಿ ರೂ ವೆಚ್ಚದಲ್ಲಿ ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮೂಲಕ ನಿರ್ಮಿಸಲು ಸಂಪುಟ ಒಪ್ಪಿಗೆ ಸೂಚಿಸಿದೆ.

ಜವಾಹರ್‌ಲಾಲ್ ನೆಹರೂ ರಾಷ್ಟ್ರೀಯ ನಗರೋತ್ಥಾನ (ನರ್ಮ್) ಯೋಜನೆ ಅಡಿಯಲ್ಲಿ ತಲಾ 31 ಲಕ್ಷ ರೂ ವೆಚ್ಚದಲ್ಲಿ ಖರೀದಿಸಲಾಗಿದ್ದ 143 ಟಾಟಾ ಮಾರ್ಕೋಪೋಲೋ

ಹವಾನಿಯಂತ್ರಿತ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲು ಸಚಿವ ಸಂಪುಟ ಸಮ್ಮತಿಸಿದೆ. ಇವುಗಳಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಕಾರ್ಯಾಚರಣೆಯಲ್ಲಿರುವ 98 ಬಸ್‌ಗಳೂ ಹಾಗೂ ಮೈಸೂರು ನಗರ ಸಾರಿಗೆಯ 45 ಬಸ್‌ಗಳೂ ಸೇರಿವೆ. ಮೇಲಿಂದ ಮೇಲೆ ದುರಸ್ತಿಗೆ ಬರುತ್ತಿದ್ದ ಈ ಬಸ್‌ಗಳ ಕಾರ್ಯಾಚರಣೆಯ ಸಂದರ್ಭದಲ್ಲಿ ಅಪಘಾತಗಳು ಸಂಭವಿಸಿವೆ. ಅಲ್ಲದೆ, ನಿರ್ವಹಣಾ ವೆಚ್ಚದಲ್ಲೂ ಸಂಸ್ಥೆಗೆ ನಷ್ಟ ಉಂಟಾಗಿದ್ದ ಹಿನ್ನೆಲೆಯಲ್ಲಿ ಸಂಪುಟ ಈ ತೀರ್ಮಾನ ಕೈಗೊಂಡಿದೆ. ಬಸ್‌ಗಳ ಖರೀದಿಗೆ ಸಂಬಂಧಿಸಿದಂತೆ ತನಿಖೆಗೂ ಆದೇಶಿಸಲಾಗಿದೆ ಎಂದು ಶ್ರೀ ಜಯಚಂದ್ರ ಅವರು ಪ್ರಕಟಿಸಿದರು.

ಡಿ ಪಿ ಎಂ : ಕೆ ಪಿ ಪಿ

## <u>ರಾಷ್ಟ್ರಕವಿ ಆಯ್ಕೆಗೆ ಜನಾಭಿಪ್ರಾಯ ಸಂಗ್ರಹ: ಕೊ. ಚನ್ನಬಸಪ್ಪ</u>

**ಬೆಂಗಳೂರು, ಜನವರಿ 9 (ಕರ್ನಾಟಕ ವಾರ್ತೆ)**

ರಾಷ್ಟ್ರಕವಿಯನ್ನು ಆಯ್ಕೆ ಮಾಡಲು ಜನಾಭಿಪ್ರಾಯ ಸಂಗ್ರಹಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೇಮಿಸಿರುವ ರಾಷ್ಟ್ರಕವಿ ಆಯ್ಕೆ ಸಮಿತಿಯ ಅಧ್ಯಕ್ಷ ಶ್ರೀ ಕೊ. ಚನ್ನಬಸಪ್ಪ ಅವರು ತಿಳಿಸಿದ್ದಾರೆ.

ಇಂದು, ಕನ್ನಡ ಭವನದಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು ಈ ವಿಷಯ ತಿಳಿಸಿದರು. ಸರ್ಕಾರವು ರಾಷ್ಟ್ರಕವಿ ಆಯ್ಕೆಗೆ ಸಮಿತಿಯನ್ನು ರಚಿಸಿದೆ. ಸಮಿತಿಯು ಈವರೆಗೆ ಮೂರು ಸಭೆಗಳಲ್ಲಿ ಸಮಾಲೋಚನೆ ನಡೆಸಲಾಗಿದೆ. ಅದರಂತೆ, ಈಗಾಗಲೇ ರಾಜ್ಯದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಸುಮಾರು 120 ಪ್ರಮುಖರಿಗೆ ಪತ್ರ ಮುಖೇನ ಈ ತಿಂಗಳಾಂತ್ಯಕ್ಕೆ ಅರ್ಹ ನಾಮನಿರ್ದೇಶನ ನೀಡಲು ಕೋರಲಾಗಿದೆ ಎಂದ ಅವರು, ಜನಸಾಮಾನ್ಯರೂ ಸಹ ರಾಷ್ಟ್ರಕವಿ ಆಯ್ಕೆಯಲ್ಲಿ ನಾಮನಿರ್ದೇಶನ ನೀಡುವ ಮೂಲಕ ಪಾಲ್ಗೊಳ್ಳಬಹುದಾಗಿದೆ ಎಂದರು.

ಸರ್ಕಾರವು ಆಯ್ಕೆಗಾಗಿ ಯಾವುದೇ ನಿಯಮಗಳನ್ನು ರೂಪಿಸಿಲ್ಲವಾದ್ದರಿಂದ ಸಮಿತಿಯೇ ಕೆಲವು ಮಾನದಂಡಗಳನ್ನು ರಚಿಸಿದೆ. ನಾಮನಿರ್ದೇಶನ ನೀಡ ಬಯಸುವವರು ಅಸಾಧಾರಣ, ಗುಣ ಗಾತ್ರದಲ್ಲಿ ಗಣನೀಯ ಶಾಶ್ವತ ಕಾವ್ಯ-ಗದ್ಯ ವಿವಿಧ ಪ್ರಕಾರಗಳ ಸಾಹಿತ್ಯ ಸೃಷ್ಟಿಸಿರುವ, ದೇಶ ಅಥವಾ ರಾಜ್ಯದ ಹಿತರಕ್ಷಣೆಗೆ ಶ್ರಮಿಸಿರುವ, ದಾರ್ಶನಿಕರಾಗಿ ಆದರ್ಶ ಜೀವನ ನಡೆಸುತ್ತಿರುವ, ಸರ್ವಧರ್ಮ ಸಮನ್ವಯ ಸಮಾನತೆ ಕಾಯ್ದುಕೊಂಡಂತಹ ಯಾವುದೇ ರಾಜಕೀಯ, ಧಾರ್ಮಿಕ ಆಪಾದನೆಗೆ ಗುರಿಯಾಗದಿರುವಂತಹ ಮೇರು ಸಾಹಿತಿಯ ಹೆಸರನ್ನು ಕಾರಣ ಸಹಿತ ಸೂಚಿಸಿ <u>ಅಧ್ಯಕ್ಷರು, ರಾಷ್ಟ್ರಕವಿ ಆಏಕೆ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ ಸಿ ರಸ್ತೆ, ಬೆಂಗಳೂರು- 560002</u> ಈ ವಿಳಾಸಕ್ಕೆ ಪತ್ರ ಮೂಲಕ <u>ದಿನಾಂಕ 27-01-2015</u> ರೊಳಗಾಗಿ ತಿಳಿಸಬಹುದಾಗಿದೆ ಎಂದವರು ಹೇಳಿದರು.

ಹಾಗೆ, ಬಂದಂತಹ ಸಲಹೆಗಳ ಬಗ್ಗೆ ಚರ್ಚಿಸಿ ತನ್ನ ಒಟ್ಟಾಭಿಪ್ರಾಯವನ್ನು ಸಮಿತಿಯು ಸರ್ಕಾರಕ್ಕೆ ತಿಳಿಸುತ್ತದೆ ಎಂದು ಚನ್ನಬಸಪ್ಪ ತಿಳಿಸಿದರು. ಇದು ಬಹುಮತದ ಆಯ್ಕೆಯಲ್ಲ, ಹಾಗೇ ಸಮಿತಿಯು ಆಯ್ಕೆ ಬಗ್ಗೆ ಅಂತಿಮ ನಿರ್ಧಾರವನ್ನೂ ಕೈಗೊಳ್ಳುವಂತಿಲ್ಲ. ಬಂದಂತಹ ಸಲಹೆಗಳನ್ನು ಪರಾಮರ್ಶಿಸಿ ಅರ್ಹರ ಹೆಸರನ್ನು

**ಸಮಿತಿಯು ಸರ್ಕಾರ ಮುಂದಿಡುತ್ತದೆ ಅಷ್ಟೆ, ಎಂದು ಸಮಿತಿಯ ಸದಸ್ಯ ಬಂಜಗೆರೆ ಜಯಪ್ರಕಾಶ್ ಅವರು ತಿಳಿಸಿದರು.**

**ಆದರೆ, ಸಮಿತಿಯು ಒಬ್ಬರನ್ನು ಆಯ್ಕೆ ಮಾಡಲೇಬೇಕೆಂಬುದು ಕಡ್ಡಾಯವೇನಲ್ಲ ಎಂದ ಅವರು, ಅರ್ಹರು ಸಿಗದೆ ಇದ್ದ ಪಕ್ಷದಲ್ಲಿ ಆಯ್ಕೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಕೈಬಿಡಬಹುದಾಗಿದೆ ಎಂದು ತಿಳಿಸಿದರು.**

## 'ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ' ರಚಿಸಲು ಅರ್ಜಿ ಆಹ್ವಾನ

**ಬೆಂಗಳೂರು, ಜನವರಿ ೨ (ಕರ್ನಾಟಕ ವಾರ್ತೆ)**

ಕನ್ನಡ ಪುಸ್ತಕ ಪ್ರಾಧಿಕಾರವು ವಿದ್ಯಾರ್ಥಿ ಯುವಜನರನ್ನು ಸಾಹಿತ್ಯಾಭಿರುಚಿಗೆ ಆಕರ್ಷಿಸಲು ಹಾಗೂ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ಬೆಳೆಸಲು ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ 'ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ' ವನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಿದೆ.

ಕನಿಷ್ಠ 5 ರಿಂದ 15 ಮಂದಿ ವಿದ್ಯಾರ್ಥಿಗಳನ್ನೊಳಗೊಂಡಂತೆ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಿಕೊಂಡು, ಆಯಾ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಕನ್ನಡ ವಿಭಾಗಗಳ ಮುಖ್ಯಸ್ಥರ ಅನುಮೋದನೆಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಕಾಲೇಜಿನಲ್ಲಿ ಸಾಂಸ್ಕೃತಿಕ ವಾತಾವರಣವನ್ನು ಕ್ರಿಯಾಶೀಲವಾಗಿಡುವ ನಿಟ್ಟಿನಲ್ಲಿ ತಿಂಗಳಿಗೆ ಒಂದರಂತೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಯನ್ನು ಈ ಬಳಗವು ಹಮ್ಮಿಕೊಳ್ಳುತ್ತದೆ. ಇದಕ್ಕಾಗಿ ಪ್ರಾಧಿಕಾರದಿಂದ ಕಾರ್ಯಕ್ರಮ ಒಂದಕ್ಕೆ ರೂ 5000/- ಗಳ ಗರಿಷ್ಟ ಮಿತಿಯೊಳಗೆ ವಾಸ್ತವಿಕ ವೆಚ್ಚವನ್ನು ಭರಿಸಲಾಗುವುದು. ಇದಲ್ಲದೆ ಪ್ರಾಧಿಕಾರವು ಹಮ್ಮಿಕೊಳ್ಳುವ ಎಲ್ಲಾ ಯೋಜನೆ ಹಾಗೂ ಕಾರ್ಯಕ್ರಮಗಳಲ್ಲಿ ಈ 'ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ' ವನ್ನು ತೊಡಗಿಸಿಕೊಳ್ಳಲಾಗುವುದು. .

ನಿಗದಿತ ಅರ್ಜಿ ನಮೂನೆಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಕಚೇರಿಯನ್ನು ಅಥವಾ ಕನ್ನಡ ಪುಸ್ತಕ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಅಂದರೆ www.kannadapusthakapradhikara.com ಅನ್ನು ಸಂಪರ್ಕಿಸಬಹುದಾಗಿದೆ. ಅರ್ಜಿಗಳನ್ನು ದಿನಾಂಕ 30-01-2015 ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002, ಇಲ್ಲಿಗೆ ಕಳುಹಿಸಿ ಕೊಡಬಹುದಾಗಿದೆ.

ಪಹೊ:ಜಿಪಿಆರ್.

***ಛಾಯಾಚಿತ್ರ ಶೀರ್ಷಿಕೆ:***

**ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶ್ರೀ ಎಂ.ಆರ್. ರಂಗಶಾಮಯ್ಯ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಶ್ರೀ ಡಾ. ಹೊ. ಶ್ರೀನಿವಾಸಯ್ಯ ಮಂಡಳಿಯ ಕಾರ್ಯದರ್ಶಿ ಶ್ರೀ ಪಿ. ಎಂ. ಚಂದ್ರಮೌಳೇಶ್ವರ ಸ್ವಾಮಿ ಅವರು ಇಂದು ಪತ್ರಿಕಾಗೋಷ್ಠಿ ನಡೆಸಿದರು.**

# <u>ಗುತ್ತಿಗೆದಾರರ ನೋಂದಣಿ ಮತ್ತು ನವೀಕರಣ ಆನ್‌ಲೈನ್‌ನಲ್ಲಿ</u>

**ಬೆಂಗಳೂರು, ಜನವರಿ ೯ (ಕರ್ನಾಟಕ ವಾರ್ತೆ)**

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿನ "ಗುತ್ತಿಗೆದಾರರ ನೋಂದಣಿ ಮತ್ತು ನವೀಕರಣದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸುವ ಸೇವೆಗೆ ಚಾಲನೆ ನೀಡಲಾಗಿದೆ. ಅದರಂತೆ ಗುತ್ತಿಗೆದಾರರು ನೊಂದಣಿ/ನವೀಕರಣಕ್ಕಾಗಿ ಇಲಾಖೆಯ ವೆಬ್‌ಸೈಟ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿ ನವೀಕರಣ ಪ್ರಕ್ರಿಯೆಯನ್ನು ದಿನಾಂಕ 31–3–2015 ರೊಳಗೆ ಪೂರ್ಣಗೊಳಿಸಬೇಕಿದ್ದು ಅರ್ಜಿಗಳನ್ನು ತುರ್ತಾಗಿ www.kpwd.gov.in ವೆಬ್‌ಸೈಟ್ ಮೂಲಕ ಸಲ್ಲಿಸಲು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ)ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# <u>ಕರ್ನಾಟಕದಲ್ಲಿ ಬೃಹತ್ ಯೂರಿಯಾ ಘಟಕ ಸ್ಥಾಪನೆ</u>

## :ಕೇಂದ್ರ ಸಚಿವ ಅನಂತ್‌ಕುಮಾರ್

**ಬೆಂಗಳೂರು, ಜನವರಿ ೯ (ಕರ್ನಾಟಕ ವಾರ್ತೆ**

ರಾಜ್ಯ ಸರ್ಕಾರದ ಸಹಯೋಗದೊಂದಿಗೆ 1.3 ಮಿ.ಟನ್ ಯೂರಿಯ ಉತ್ಪಾದಿಸುವ ಕಾರ್ಖಾನೆಯನ್ನು ಕರ್ನಾಟಕದಲ್ಲಿ ಪ್ರಾರಂಭಿಸಲಾಗುವುದೆಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಶ್ರೀ ಅನಂತಕುಮಾರ್ ಅವರು ಘೋಷಿಸಿದರು.

ಅವರು ಇಂದು ಲಾಲ್‌ಬಾಗ್‌ನಲ್ಲಿ ಏರ್ಪಡಿಸಿದ್ದ ಹಾರ್ಟಿ ಸಂಗಮ 2015 ಅಂತಾರಾಜ್ಯ ತೋಟಗಾರಿಕಾ ಮೇಳವನ್ನು ಉದ್ಘಾಟಿಸಿ ಮಾತನಾಡುತ್ತಾ ದೂರದ ಊರುಗಳಿಂದ ರಸಗೊಬ್ಬರನವನ್ನು ತರಿಸುವ ಬದಲು ಕರ್ನಾಟದಲ್ಲಿಯೇ ರಸಗೊಬ್ಬರ ಕಾರ್ಖಾನೆಯನ್ನು ನಿರ್ಮಾಣ ಮಾಡುವುದರ ಬಗ್ಗೆ ಈಗಾಗಲೇ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗಿದೆ ಎಂದರು.

ಕರ್ನಾಟಕದಲ್ಲಿ ಆಹಾರ ಸಂಸ್ಕರಣಾ ಘಟಕ ಮತ್ತು ತೋಟಗಾರಿಕೆ ಬೆಳೆಗಳಿಗೆ ಶೈತ್ಯಾಗಾರ ಹಾಗೂ ಮಾರುಕಟ್ಟೆ ಸಂಘ ರಚನೆಯಾಗಬೇಕಾಗಿದ್ದು ಇದರ ಸಂಬಂಧವಾಗಿ ಕೇಂದ್ರ ಹಣಕಾಸು ಸಚಿವಾಲಯದೊಂದಿಗೆ ಹಾಗೂ ಪ್ರಧಾನ ಮಂತ್ರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದರು.

ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ ಲಿ. ಅನ್ನು ಪುನ: ಪ್ರಾರಂಭ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರ ಈಗಾಗಲೇ ತೀರ್ಮಾನ ಕೈಗೊಂಡಿದೆ. ಇದರ ಸಂಬಂಧವಾಗಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗಿದೆ ಎಂದರು.

ಇನ್ನು ಮುಂದೆ ದೇಶದಲ್ಲಿ ಕೇವಲ ಯೂರಿಯ ದೊರೆಯುವುದಿಲ್ಲ. ಬೇವು ಲೇಪಿತ ಯೂರಿಯಾ ಸಿಗಲಿದೆ ಎಂದರು. ಇದರಿಂದ ಸುಮಾರು ಶೇ. 15 ರಷ್ಟು ಕಡಿಮೆ ಯೂರಿಯಾ ಬಳಕೆ ಮಾಡಬಹುದು ಮತ್ತು ಹೆಚ್ಚು ಇಳುವರಿ ಪಡೆಯಬಹುದುದೆಂದು ತಿಳಿಸುತ್ತಾ ಇದು ಕ್ರಾಂತಿಕಾರಿ ಹೆಜ್ಜೆಯಾಗಲಿದೆಯೆಂದರು ಭಾರತ ದೇಶಕ್ಕೆ ಬೇವು ಲೇಪಿತ ಯೂರಿಯ ಬಳಸುವುದರಿಂದ ಸುಮಾರು 10,000 ಕೋಟಿ ರೂ. ಲಾಭ ದೊರೆಯಲಿದೆ ಎಂದರು.

ಕೇಂದ್ರ ಕೃಷಿ ಸಚಿವ ಶ್ರೀ ರಾಧಾ ಮೋಹನ್‌ಸಿಂಗ್ ಅವರು ಮಾತನಾಡಿ ಈ ತಿಂಗಳ ಅಂತ್ಯದಲ್ಲಿ ಸುಮಾರು 568 ಯೋಜನೆಗಳ ಅಡಿಯಲ್ಲಿ ಮಣ್ಣು ಪರೀಕ್ಷಾ ಕೇಂದ್ರ ಪ್ರಾರಂಭಿಸಲಾಗುವುದು. ಇದರಿಂದ ದೇಶದಲ್ಲಿ 14,000 ಕೋಟಿ ರೈತರಿಗೆ ಉಪಯೋಗವಾಗಲಿದೆ. ಈ ಯೋಜನೆಯನ್ನು 3 ವರ್ಷದೊಳಗೆ ಪೂರ್ಣಗೊಳಿಸಲಾಗುವುದು. ಇದಕ್ಕಾಗಿ 60 ಕೋಟಿ ರೂ. ವೆಚ್ಚದಲ್ಲಿ ಶಾಶ್ವತ ಮಣ್ಣು ಪರೀಕ್ಷಾ ಕೇಂದ್ರ ಸ್ಥಾಪಿಸಲಾಗುವುದು ಎಂದರು.

ಆಲೂಗಡ್ಡೆ ಮತ್ತು ಈರುಳ್ಳಿ ಬೆಲೆ ಕಡಿಮೆಯಾದಾಗ ಸರ್ಕಾರವೇ ಖರೀದಿಸಿ ಶೇಖರಿಸಿಡಲಾಗುವುದು. ಇದರ ಬೆಂಬಲ ಬೆಲೆ ದೊರೆತಾಗ ಅದನ್ನು ಮಾರಾಟ ಮಾಡಲಾಗುವುದೆಂದು ರಾಜ್ಯದ ಕೃಷಿ ಸಚಿವ ಶಾಮನೂರು ಶಿವಶಂಕರಪ್ಪ ಅವರು ತಿಳಿಸಿದರು. ಅಕಾಲಿಕ ಮಳೆ ಹಾಗೂ ಬರದಿಂದ ತೆಂಗು ಮತ್ತು ಅಡಿಕೆ ಬೆಳೆಗಳು ನಾಶವಾಗಿದ್ದು ಇದಕ್ಕೆ ಕೇಂದ್ರ ಸರ್ಕಾರದಿಂದ ನಷ್ಟ ಪರಿಹಾರ ಇನ್ನೂ ದೊರೆತಿಲ್ಲ. ಕೇರಳ ಮಾದರಿಯಲ್ಲಿಯೇ ನಷ್ಟ ಪರಿಹಾರ ಬಿಡುಗಡೆ ಮಾಡಬೇಕೆಂದು ಸಚಿವರು ಕೋರಿದರು.